ಈ) ಹುಬ್ಬಳ್ಳಿ–ಧಾರವಾಡ ಒಳಚರಂಡಿ ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಬೇಕಾಗಿದೆ. ಹುಬ್ಬಳ್ಳಿ–ಧಾರವಾಡ ಅವಳಿನಗರದ ಸಮಗ್ರ ಒಳಚರಂಡಿ ಯೋಜನೆಗೆ ಅಂದಾಜು ರೂ. 200.00 ಕೋಟಿ ವೆಚ್ಚ ತಗಲಬಹುದು.

...

315 (423) : ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಳೇ ಹುಬ್ಬಳ್ಳಿ ಈಶ್ವರನಗರ ಮಾರ್ಗವಾಗಿ ಕಟ್ಟೂರ ಮಾವನೂರ ರಸ್ತೆ ಡಾಂಬರೀಕರಣ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ರಸ್ತೆ ಡಾಂಬರೀಕರಣ ಮಾಡಲು ಹಾಗೂ ದುರಸ್ತಿ ಮಾಡಲು ತಗಲುವ ಅಂದಾಜು ವೆಚ್ಚವೆಷ್ಟು;

ಇ) ಡಾಂಬರೀಕರಣದ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಈ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹಳೇ ಹುಬ್ಬಳ್ಳಿ ಈಶ್ವರನಗರ ಮಾರ್ಗವಾಗಿ ಕಟ್ಟೂರ ಮಾವನೂರ ರಸ್ತೆಯು ಒಟ್ಟು 7 ಕಿ.ಮೀ. ಉದ್ದವಿದ್ದು, ಸದರಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–4ರ ಬೈಪಾಸ್ ರಸ್ತೆಯಿಂದ ಕಟ್ಟೂರ–ಮಾವನೂರದವರೆಗೆ 2000–01ನೇ ಸಾಲಿನ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ರೂ. 61.52 ಲಕ್ಷ ಅಂದಾಜು ವೆಚ್ಚದಲ್ಲಿ ಈಗಾಗಲೇ ಪೂರ್ಣಗೊಳಿಸಲಾಗಿದ್ದು, ಸುಸ್ಥಿತಿಯಲ್ಲಿರುತ್ತದೆ. ಈಶ್ವರನಗರದಿಂದ ಬೈಪಾಸ್‌ವರೆಗಿನ ರಸ್ತೆಯು ಹುಬ್ಬಳ್ಳಿ–ಧಾರವಾಡ ಕಾರ್ಪೋರೇಶನ್ ವ್ಯಾಪ್ತಿಗೆ ಒಳಪಟ್ಟಿದ್ದು, ಸುಮಾರು ಉದ್ದ 0.50 ಕಿ.ಮೀ ಇರುತ್ತದೆ. ಈ ರಸ್ತೆ ದುರಸ್ತಿ ಬಗ್ಗೆ ಹುಬ್ಬಳ್ಳಿ–ಧಾರವಾಡ ಕಾರ್ಪೋರೇಶನ್ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಇ) ಈ ಬಗ್ಗೆ ಹುಬ್ಬಳ್ಳಿ–ಧಾರವಾಡ ಕಾರ್ಪೋರೇಶನ್ ರವರು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈ) ಉದ್ಭವಿಸುವುದಿಲ್ಲ.

...

317 (517) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೇಲೂರು ಘೋಷಣೆಯಂತೆ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದಕ್ಕಾಗಿ ಕುಡಿಯುವ ನೀರು ಪೂರೈಕೆ ಯೋಜನೆಗಳ ಜವಾಬ್ದಾರಿಯನ್ನು ವಹಿಸಲು ನಿರ್ಧರಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ, ಅಧಿಕಾರದಿಂದ ನಿರ್ಗಮಿಸುವ ಸಂದರ್ಭದಲ್ಲಿ ಈ ನಿರ್ಧಾರವನ್ನು ಬದಲಿಸಿ ಪುನಃ ಜಿಲ್ಲಾ ಪಂಚಾಯತಿಗಳಿಗೆ ವಹಿಸಲು ಕಾರಣಗಳೇನು;

ಇ) ಇದರಿಂದ ಜಿಲ್ಲಾ ಪಂಚಾಯತ್ ಮಟ್ಟದಲ್ಲಿಯೇ ಅಸಮಾಧಾನ ಎದ್ದಿರುವುದು ಬೆಳಕಿಗೆ ಬಂದಿದೆಯೇ; **106-95**

ಈ) ಜಲ ನಿರ್ಮಲ ಯೋಜನೆಯಡಿ ಪಂಚಾಯತಿಗಳು ರೂ. 50.00 ಲಕ್ಷ ವರೆಗಿನ ಕಾಮಗಾರಿ ಅನುಷ್ಠಾನಕ್ಕೆ ತಂದಿರುವಾಗ, ನೀರು ಪೂರೈಕೆ ಯೋಜನೆ ನಿರ್ವಹಣೆ ಏಕೆ ಸಾಧ್ಯವಿಲ್ಲ; (ವಿವರ ಒದಗಿಸುವುದು)

ಉ) ಇದರಿಂದ ಅಧಿಕಾರ ವಿಕೇಂದ್ರಿಕರಣ ನೀತಿಗೆ ತಿಲಾಂಜಲಿ ಕೊಟ್ಟಂತಾಗುವುದಿಲ್ಲವೇ; (ಪೂರ್ಣ ಮಾಹಿತಿ ಒದಗಿಸಿರಿ)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಈ ಕುರಿತು ಇನ್ನು ಅಂತಿಮ ನಿರ್ಧಾರವಾಗಿಲ್ಲ.

ಇ) ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಂಘ ಈ ಬಗ್ಗೆ ಮನವಿ ಸಲ್ಲಿಸಿದೆ.

ಈ) ಈಗ ರಾಜ್ಯದ ಗ್ರಾಮ ಪಂಚಾಯತ್‌ಗಳು ಕುಡಿಯುವ ನೀರು ಪೂರೈಕೆ / ನೈರ್ಮಲ್ಯ ಯೋಜನೆಗಳ ನಿರ್ವಹಣೆ ಮಾಡಲು ಸಮರ್ಥವಾಗಿವೆ.

ಉ) ಪಂಚಾಯತ್ ರಾಜ್ ಅಧಿನಿಯಮ, ಅದರಡಿ ರಚಿಸಿದ ನಿಯಮಗಳು ಮತ್ತು ಬೇಲೂರು ಘೋಷಣೆಯನ್ವಯ ಅಧಿಕಾರ ವಿಕೇಂದ್ರೀಕರಣ ಮಾಡುವ ನೀತಿಗೆ ಸರ್ಕಾರವು ಬದ್ಧವಾಗಿದೆ.

...

319 (519) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದವರು ಇತ್ತೀಚೆಗೆ ಐಎನ್‌ಜಿ ವೈಶ್ಯ ಬ್ಯಾಂಕ್‌ನಲ್ಲಿ ಫಿಕ್ಸೆಡ್ ಡಿಪಾಜಿಟ್‌ನಲ್ಲಿದ್ದ 5 ಕೋಟಿಗೂ ಹೆಚ್ಚು ಹಣವನ್ನು ಅವಧಿ ಮುಗಿಯುವ ಮೊದಲೇ ಯಾವುದೇ ಸಕಾರಣವಿಲ್ಲದೆ ವಾಪಸ್ಸು ಪಡೆದುಕೊಂಡು ಮತ್ತೊಂದು ಬ್ಯಾಂಕಿನಲ್ಲಿ ಜಮಾ ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಕ್ರಮದಿಂದ ಪ್ರಾಧಿಕಾರಕ್ಕೆ ಲಕ್ಷಾಂತರ ರೂಪಾಯಿಯ ನಷ್ಟ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ರೀತಿ ಹಣ ವಾಪಸಾತಿಗೆ ಕಾರಣವೇನು ಹಾಗೂ ಇದರಲ್ಲಿ ಶಾಮೀಲಾಗಿರುವ ವ್ಯಕ್ತಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) – ಹೌದು –

ಆ) – ಇಲ್ಲ –

ಇ) ಐಎನ್‌ಜಿ ವೈಶ್ಯ ಬ್ಯಾಂಕ್‌ನವರು ಉಳಿತಾಯ ಖಾತೆಯ ಒಂದು ಕೋಟಿ ಮೂರು ಸಾವಿರ ರೂಪಾಯಿಗಳನ್ನು ನಿಶ್ಚಿತ ಠೇವಣಿಯಾಗಿ ಪರಿವರ್ತಿಸಿ ಆ ಮೊಬಲಗಿಗೂ ಸಹ ನಿಶ್ಚಿತ ಠೇವಣಿಗೆ ನೀಡುತ್ತಿರುವ ದರದಲ್ಲಿಯೇ ಬಡ್ಡಿಯನ್ನು ನೀಡಲು ನಿರಾಕರಿಸಿದ ಕಾರಣ ಡಿಫಾಸಿಟನ್ನು ರಾಷ್ಟ್ರೀಕೃತ ಬ್ಯಾಂಕಿಗೆ ವರ್ಗಾವಣೆ ಮಾಡಲಾಗಿದೆ. ಇದರಲ್ಲಿ ಯಾವುದೇ ವ್ಯಕ್ತಿಗಳು ಶಾಮೀಲಾಗಿರುವುದಿಲ್ಲ.